ಕರ್ನಾಟಕ ಲೋಕಾಯುಕ್ತ

ನಂ:ಕಂ.ಲೋಕ್.ಬಿಸಿಡಿ 2520/2018

ಬಹುಮಹಡಿ ಕಟ್ಟಡ,
ಬೆಂಗಳೂರು,ದಿನಾಂಕ:30/04/2019

ನೋಟೀಸು

ವಿಷಯ: ಹೆಚ್.ಎಸ್.ದೊರೈಸ್ವಾಮಿ ಎಂಬುವವರು ನಮ್ಮ ಸಂಸ್ಥೆಯಲ್ಲಿ ನೀಡಿರುವ ದೂರಿನ ಕುರಿತು.

--

ಮೇಲ್ಕಂಡ ವಿಷಯಕ್ಕೆ ಸಂಬಂದಪಟ್ಟಂತೆ ತಮಗೆ ಈ ಮೂಲಕ ಗೌರವಾನ್ವಿತ ಲೋಕಾಯುಕ್ತರವರ ಆದೇಶದಂತೆ ತಮಗೆ ಈ ಮೂಲಕ ತಿಳಿಯ ಪಡಿಸುವುದೇನೆಂದರೆ, ಗೌರವಾನ್ವಿತ ಲೋಕಾಯುಕ್ತರವರು **ಹೊರಮಾವು ಜಯಂತಿನಗರ ಕೆರೆಗೆ** ಸಂಬಂದಪಟ್ಟಂತೆ ದಿನಾಂಕ: **25-04-2019 ರಂದು ಹೊರಡಿಸಿರುವ ಆದೇಶವನ್ನು ಇದರೊಂದಿಗೆ ಲಗತ್ತಿಸಿ ತಮ್ಮ ಮುಂದಿನ ಸೂಕ್ತ ಕ್ರಮಕ್ಕಾಗಿ ಸೂಕ್ತ ಕ್ರಮ ಕೈಗೊಂಡು ಅನುಪಾಲನಾ ವರದಿಯನ್ನು ಆದೇಶದಲ್ಲಿ ತಿಳಿಸಿರುವ ನಿಗಧಿತ ಸಮಯದೊಳಗಾಗಿ ಸಲ್ಲಿಸತಕ್ಕದ್ದು,**

**ಮುಂದುವರೆದು ಸದರಿ ಪ್ರಕರಣವನ್ನು ದಿ:09-11-2019 ರಂದು 3-00ಕ್ಕೆ ಮುಂದಿನ ವಿಚಾರಣೆಗಾಗಿ ನಿಗಧಿ** ಪಡಿಸಿದೆ.

ಗೌರವಾನ್ವಿತ ಲೋಕಾಯುಕ್ತರವರ ಆದೇಶದನ್ವಯ

ಅಪರ ನಿಭಂದಕರು ವಿಚಾರಣೆಗಳು-1
ಕರ್ನಾಟಕ ಲೋಕಾಯುಕ್ತ,ಬೆಂಗಳೂರು

1) **The C.E.O., Namma Bangalore foundation, 2nd floor, No54, Rockline centre, Richmond Road, Bangalore.**

2) **sri. R.V.Bhat, Legal Officer, Chief Environmental officer, Karnataka State Pollution Control Board, Church street** Bangalore.

**3) Sri. Prakash, Asst.Executive Engineer, B W S S B, Cauvery Bhavan, Bangalore**

**4) Smt. Bhupradha, Assistant Executive Engineer(Lakes), BBMP, Bangalore.**

**5) Sri.Ravi kumar.K.N., Asst. Engineer, BDA, Bangalore 9845229136**

6) The Secretary, Horamavu Parisara Abhivruddi sangha,

7) The JDLR, K.R.Circle, Bangalore Urban Dist.

# KARNATAKA LOKAYUKTA, BENGALURU

No:Compt/LOK/BCD-2520/2018 Date : 25-04-2019

## ORDER

No one is present on behalf of the complainant.

2. Sri R.V.Bhat, Legal Officer of KSPCB is present along with Sri Kumaraswamy, Chief Environmental Officer and Dr. B.Madhavi, Deputy Environmental Officer.

3. A status report dated 24-04-2019 is filed on behalf of KSPCB. It is useful to extract the same, which reads as hereunder:

"**ವಿಷಯ:** ಶ್ರೀ. ಹೆಚ್. ಎಸ್. ದೊರೆಸ್ವಾಮಿಯವರು
ನೀಡಿರುವ ದೂರಿನ ಕುರಿತು.

**ಉಲ್ಲೇಖ:** **1**. ಕರ್ನಾಟಕ ಲೋಕಾಯುಕ್ತ ಪತ್ರ ಸಂಖ್ಯೆ:
ಲೋಕ್.ಬಿಸಿಡಿ 520/2018 ದಿನಾಂಕ.24.09.2018.

*****

ಗೌರವಾನ್ವಿತ ಲೋಕಾಯುಕ್ತರು ದಿನಾಂಕ: 11.09.2018ರಂದು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ (ಎದುರುದಾರ-2) ರವರಿಗೆ ನೀಡಿದ ನಿರ್ಧೇಶನದಂತೆ ಮಂಡಳಿಯ ಅಧಿಕಾರಿಗಳು ಸಂಬಂಧಪಟ್ಟ ಕೆರೆ ಮತ್ತು ಸುತ್ತಮುತ್ತಲಿನ ಪ್ರದೇಶಗಳನ್ನು ಪರಿಶೀಲಿಸಿ ವರದಿಯನ್ನು ಮಾನ್ಯರವರಲ್ಲಿ ಸಲ್ಲಿಸಲಾಗುತ್ತಿದೆ.

**ಪ್ರಾದೇಶಿಕ ಅಧಿಕಾರಿ ಯಲಹಂಕ ರವರು ದಿನಾಂಕ. 03.04.2019 ರಂದು ಈ ಕೆಳಗಿನ ಕೆರೆಯನ್ನು ಪರಿವೀಕ್ಷಣೆ ಮಾಡಿರುತ್ತಾರೆ.**

1. **ಹೊರಮಾವು ಜಯಂತಿಪುರ:** ಈ ಕೆರೆಯು ಸುಮಾರು 37 ಎಕರೆ ಪ್ರದೇಶದಲ್ಲಿದೆ ಎಂದು ತಿಳಿದುಬಂದಿರುತ್ತದೆ.
   - ಈ ಕೆರೆಯು ಮೊದಲು ಬಿಡಿಎ ಅಧೀನದಲ್ಲಿತ್ತು ಈಗ ಬಿಬಿಎಂಪಿಯವರ ಅಧೀನದಲ್ಲಿದೆ ಎಂದು ತಿಳಿದುಬಂದಿರುತ್ತದೆ.

- ಈ ಕೆರೆಯ ಸುತ್ತಲೂ ಬೇಲಿಯನ್ನು ಹಾಕಲಾಗಿದೆ. ಆದರೆ ಬೇಲಿಯು ಅಲ್ಲಲ್ಲಿ ಕಿತ್ತುಹೋಗಿರುತ್ತದೆ.
- ಈ ಮೊದಲು ಕೆರೆಯ ಸುತ್ತ ಘನತ್ಯಾಜ್ಯವನ್ನು ಹಾಗೂ ಕಟ್ಟಡ ತ್ಯಾಜ್ಯವನ್ನು ಸುರಿಯಲಾಗಿತ್ತು. ಆದರೆ ಈಗ ಈತರಹದ ತ್ಯಾಜ್ಯಗಳನ್ನು ಈಗ ವಿಲೇವಾರಿಮಾಡುತ್ತಿರುವುದಿಲ್ಲ.
- ಜಯಂತಿ ನಗರದ ವಸತಿ ಪ್ರದೇಶಗಳಿಂದ ಹಾಗೂ ವಾಣಿಜ್ಯ ಪ್ರದೇಶಗಳಿಂದ ಮಲೀನ ರೊಚ್ಚುನೀರು ಪಶ್ಚಿಮದ ಕಡೆಯಿಂದ ಕೆರೆಯನ್ನು ಸೇರುತ್ತಿದೆ.
- ಕೆರೆಯಲ್ಲಿ ಜಲಸಸ್ಯಗಳು ಬೆಳೆದಿರುತ್ತವೆ.
- ತಂಬುಚ್ಚೆಟ್ಟಿ (ಟಿ.ಸಿ) ಪಾಳ್ಯದ ಮುಖ್ಯರಸ್ತೆಯ ಸುತ್ತಮುತ್ತಲಿರುವ ಪ್ರದೇಶಗಳಿಗೆ ಒಳಚರಂಡಿ ವ್ಯವಸ್ಥೆ ಇಲ್ಲದಿರುವ ಕಾರಣ ಮಲೀನ ನೀರು ಕೆರೆಯನ್ನು ಸೇರುತ್ತಿದೆ. ಈ ಕೆರೆಗೆ ಅತಿ ಸಣ್ಣ ಕಾರ್ಖಾನೆಗಳಿಂದ ಮಲೀನ ನೀರು (Domestic) ಸೇರುತ್ತಿದೆ. ಈ ಪ್ರದೇಶಕ್ಕೆ ಯು.ಜಿ.ಡಿ ಅಳವಡಿಸಿ ರೊಚ್ಚುನೀರಿನ ಶುದ್ಧೀಕರಣ ಘಟಕವನ್ನು ಸ್ಥಾಪಿಸುವುದರಿಂದ ಕೆರೆಯ ಮಾಲಿನ್ಯ ವನ್ನು ತಡೆಗಟ್ಟಬಹುದು.
- ಬಿಬಿಎಂಪಿ ಹಾಗೂ ಬಿ.ಡ್ಬ್ಲ್ಯೂ.ಎಸ್.ಎಸ್.ಬಿ ಈ ಕೆರೆಯನ್ನು ನಿರ್ವಹಣೆ ಮಾಡಬೇಕಾಗಿದೆ.
- ದಿನಾಂಕ 14.02.2019 ರಂದು ನೀರಿನ ಮಾದರಿಗಳನ್ನು ಸಂಗ್ರಹಿಸಿ ವಿಶ್ಲೇಷಣೆ ಮಾಡಲಾಗಿ ನೀರಿನ ಗುಣಮಟ್ಟವು ಡಿ–ಕ್ಲಾಸ್‌ಗೆ ಸರಿಹೊಂದುತ್ತದೆ. ಅಂದರೆ ವನ್ಯಜೀವಿಗಳಿಗೆ ಹಾಗೂ ಮೀನುಗಳನ್ನು ಸಾಕಲು ಮಾತ್ರ ನೀರನ್ನು ಉಪಯೋಗಿಸಬಹುದಾಗಿದೆ. ದಿನಾಂಕ 03.04.2019ರಂದು ನೀರಿನ ಮಾದರಿಗಳನ್ನು ಸಂಗ್ರಹಿಸಿ ವಿಶ್ಲೇಷಣೆಗೆ ಕಳುಹಿಸಲಾಗಿದೆ.

**ಹೆಚ್ಚಿನ ಮಾಹಿತಿ**

ಕಲಂ: 15 BWSSB 1964 ರಂತೆ ರೊಚ್ಚು ನೀರನ್ನು ಸಂಸ್ಕರಣೆ ಮಾಡಿ ಸರಿಯಾದ ನೀರನ್ನು ಸಾರ್ವಜನಿಕರಿಗೆ ನೀಡುವ ಕರ್ತವ್ಯವು BWSSB ಸಂಸ್ಥೆಯ ವ್ಯಾಪ್ತಿಗೆ ಬರುತ್ತಿದ್ದು ಈ ಬಗ್ಗೆ ಮಂಡಳಿಯಿಂದಲೂ ಸಾಕಷ್ಟು ನಿರ್ದೇಶನಗಳನ್ನು ನೀಡಲಾಗಿರುತ್ತದೆ. ಅದರಂತೆ ಕಲಂ 63 ಹಾಗೂ 64 ರಂತೆ ರೊಚ್ಚು ನೀರು ಸಂಸ್ಕರಣಾ ಘಟಕಗಳ ಸ್ಥಾಪನೆ ಮಾಡುವ ಜವಾಬ್ಧಾರಿಯು BWSSB ಸಂಸ್ಥೆಯ ಮುಖ್ಯ ಕರ್ತವ್ಯವಾಗಿರುತ್ತದೆ.

ಘನತ್ಯಾಜ್ಯ ನಿರ್ವಹಣೆ ನಿಯಮ 2016ರ ಕಲಂ 15ರ ಅನ್ವಯ ಸ್ಥಳೀಯ ಸಂಸ್ಥೆಗಳ ( ಬಿಬಿಎಂಪಿ ) ಘನತ್ಯಾಜ್ಯ ನಿರ್ವಹಣೆ ಮಾಡುವ ಜವಾಬ್ದಾರಿಯನ್ನು ಹೊಂದಿದ್ದು ಹಾಗೂ ಕಟ್ಟಡ ತ್ಯಾಜ್ಯ ನಿರ್ವಹಣೆ ನಿಯಮಗಳಂತೆ ನಿರ್ವಹಣಾ ಜವಾಬ್ದಾರಿಯನ್ನು ಬಿಬಿಎಂಪಿ ಹೊಂದಿದ್ದು ಈ ಬಗ್ಗೆ ಮಂಡಳಿಯಿಂದ ಬಿಬಿಎಂಪಿಗೆ ನಿರ್ದೇಶನಗಳನ್ನು ಕಾಲಕಾಲಕ್ಕೆ ನೀಡಲಾಗಿರುತ್ತದೆ.

ಆದ್ದರಿಂದ ಗೌರವಾನ್ವಿತ ಲೋಕಾಯುಕ್ತರಲ್ಲಿ ಈ ಸಂಸ್ಥೆಗಳಾದ ಬಿಬಿಎಂಪಿ ಮತ್ತು ಬಿಡಬ್ಲ್ಯೂಎಸ್‌ಎಸ್‌ಬಿಗಳಿಗೆ ಕೆರೆಗೆ ರೊಚ್ಚುನೀರು ಸೇರುವುದನ್ನು ತಡೆಯುವ ಕುರಿತು ಹಾಗೂ ಘನ ತ್ಯಾಜ್ಯಗಳನ್ನು ಸೂಕ್ತ ನಿರ್ವಹಣೆ ಕುರಿತು ಸಂಬಂಧಪಟ್ಟ ಇಲಾಖೆಗೆ ಸೂಕ್ತ ನಿರ್ದೇಶನ ನೀಡಲು ಪ್ರಾರ್ಥಿಸಲಾಗಿದೆ."

4. Sri Bhat submitted, unless the Under Ground Drainage System is put in place, Pollution Control Board cannot be take further steps in the matter.

5. On behalf of Bengaluru Development Authority Sri K.N.Ravikumar, Assistant Engineer is present. He has filed a status report dated 25-04-2019. It is useful to extract the said report, which reads as hereunder:

"... ಹೊರಮಾವು ಜಯಂತಿ ನಗರ ಕೆರೆ ಸಂಬಂಧಪಟ್ಟಂತೆ ದಿನಾಂಕ:06.02.2019 ರಂದು ಮಾನ್ಯ ಗೌರವಾನ್ವಿತ ಲೋಕಾಯುಕ್ತರವರು ಹೊರಡಿಸಿರುವ ಆದೇಶದನ್ವಯ ಕ್ರಮಕೈಗೊಂಡಿರುವ ಬಗ್ಗೆ ಪ್ರಸ್ತುತ ವರದಿಯನ್ನು ದಿನಾಂಕ:25.04.2019 ರೊಳಗಾಗಿ ಸಲ್ಲಿಸಲು ತಿಳಿಸಲಾಗಿತ್ತು.

ಅದರಂತೆ, ಮಾನ್ಯ ಗೌರವಾನ್ವಿತ ಲೋಕಾಯುಕ್ತರವರ ಆದೇಶದನ್ವಯ ಸದರಿ ಪ್ರಸ್ತಾಪಿತ ಹೊರಮಾವು ಜಯಂತಿನಗರ ಕೆರೆಗೆ ತಂತಿಬೇಲಿ ನಿರ್ಮಾಣ ಮಾಡಲು ರೂ.9.93 ಲಕ್ಷಗಳಿಗೆ ಅಂದಾಜು ಪಟ್ಟಿ ತಯಾರಿಸಿ ಪ್ರಾಧಿಕಾರದ ಮಾನ್ಯ ಆಯುಕ್ತರವರಿಂದ ಅನುಮೋದನೆ ಪಡೆಯಲು ಸಲ್ಲಿಸಲಾಗಿದೆ. ಈ ನಡುವೆ ಲೋಕಸಭಾ ಚುನಾವಣೆ ಘೋಷಣೆಯಾಗಿದ್ದರಿಂದ ಮಾನ್ಯ ಆಯುಕ್ತರವರು ಸದರಿ ಅಂದಾಜು ಪಟ್ಟಿಗೆ ನೀತಿ ಸಂಹಿತೆ ಉಲ್ಲಂಘನೆಯಾಗುವುದೆಂದು ಅನುಮೋದನೆ ನೀಡಿರುವುದಿಲ್ಲ. ಆದ್ದರಿಂದ ಸದರಿ ಕಾಮಗಾರಿಯನ್ನು ತಕ್ಷಣ ಕೈಗೊಳ್ಳಲು ಸಾಧ್ಯವಾಗಿರುವುದಿಲ್ಲ. ಈಗ ಚುನಾವಣೆ ಮುಗಿದಿರುವುದರಿಂದ, ಮಾನ್ಯ ಆಯುಕ್ತರಿಂದ ಅನುಮೋದನೆ ಪಡೆದು ತಕ್ಷಣ ಕ್ರಮ ಕೈಗೊಳ್ಳಲಾಗುವುದು ಎಂದು ವರದಿಯನ್ನು ಈ ಮೂಲಕ ತಮ್ಮ ಅವಗಾಹನೆಗೆ ಸಲ್ಲಿಸಲಾಗಿದೆ.

ಇದುವರೆವಿಗೆ ಕ್ರಮಕೈಗೊಂಡಿರುವ ಬಗ್ಗೆ ವರದಿಗಳ ಜೆರಾಕ್ಸ್ ಪ್ರತಿಗಳನ್ನು ಈ ಪತ್ರದೊಂದಿಗೆ ಲಗತ್ತಿಸಿ ಸಲ್ಲಿಸಲಾಗಿದೆ."

6. Sri K.N.Ravikumar has submitted that, a proposal has been sent to the Commissioner for the approval of the estimate. He further submits, according to the estimate a sum of Rs.9.73 lakhs is required for the fencing of the lake. He submitted that in view of the election code of conduct, my earlier order could not be given effect to.

7. In my order dated 06-02-2019, after hearing the concerned officers, I have given certain directions at paragraph 10 of the order. It is useful to extract the same, which reads as hereunder:

> "10) In the light of the submission made by the parties as stated above, it would be in the interest of justice to issue the following directions –
>
> (i) The Joint Director of Land Records, Bengaluru Urban District is directed to get the Horamavu Jayanthipura Lake surveyed or to complete the survey which is stated to have been done earlier within a period of **eight weeks from today** and submit a report to the Lokayukta, after serving a copy of the report to all the parties concerned.
>
> (ii) The BDA to take immediate steps to carry out repair works relating to fencing whereever it is broken and in a bad shape **within six weeks from**

**today** without waiting for the release of the funds from the State Government.

(iii) The BWSSB is directed to take steps to install underground drainage and establish Sewerage Treatment Plant to treat all the effluent water that may be discharged to the lake and also take such other steps that may be required to prevent the discharging of effluent in to the lake.

(iv) The BDA is also directed to take such other steps, as may be necessary to prevent discharge of the effluent substance to the lake.

(v) The BBMP is directed to take effective steps for disposal of the solid waste stored or to be found in and around the lakes. In this connection, it is needless to point out that it is the responsibility of the concerned local Engineer of BBMP to carry out the instructions/directions given above."

8. Having regard to the fact that the code of conduct for the purpose of parliamentary election came into effect from 18th March 2019, I am of the view, in the interest justice to give another ten weeks time to BWSSB & BBMP to comply with the directions given at paragraph 10, which is extracted above. BWSSB is also directed to set out clearly the time required by it to complete the project Underground Drainage System

and Sewage Treatment Plant so far as Horamavu Lake is concerned.

9. Communicate this order to all the parties concerned.

**List this matter on 09-11-2019 at 3.00 p.m.**

**(Justice P.Vishwanatha Shetty)**
Lokayukta, State of Karnataka

25/4/2019.

ck*

ARE-1)